ಕುಡಿತದಿಂದ ದೂರ ಇರ್ಬೇಕಂತ ನಿಯಮ ಇದೆ. ನಮ್ಮನೆ ಮುಂದೆ ದಿನಾ ತೂರಾಡ್ತಾ ಹೋಗ್ತಿದ್ದೋನೊಬ್ಬ ದಿಢೀರ್ ಸಭ್ಯನಂತೆ ಕಂಡದ್ದು ಫ್ಲೆಕ್ಸ್ ಒಂದರಲ್ಲಿ. ನಾಲ್ಕಾರು ಜನರ ಜೊತೆ ಕಪ್ಪು ಲುಂಗಿ, ಕಪ್ಪು ಅಂಗವಸ್ತ್ರ, ತಲೆ ಮೇಲೊಂದು ಗಂಟು. ಅವರೆಲ್ರೂ ಶಬರಿಮಲೆಗೆ ಹೊರಟಿರೋ ಕಾರಣ ಶುಭಹಾರೈಸೋ ಗೆಳೆಯರ ಮುಖಗಳು. ನಾನು ಅವ್ನ ಹೆಂಡ್ತಿಗೆ, ''ಇನ್ಮುಂದೆ ನಿನ್ ಗಂಡ ಕುಡ್ಕೊಂಡ್ ಬರಲ್ಲ, ಆರಾಮಾಗಿರು, ಅಯ್ಯಪ್ಪ ಸ್ವಾಮಿ ಒಳ್ಳೆ ಬುದ್ಧಿ ಕೊಡ್ತಾನೆ,'' ಎಂದು ಸಮಾಧಾನ ಹೇಳಿದ್ದೆ. ಅವ್ಳು ಸುಮ್ನೆ ನಕ್ಕಿದ್ದಳು ಅಷ್ಟೆ. ಅವ್ಳಿಗೆ ಗೊತ್ತಿಲ್ವೆ ಅವ್ನ ದೇವ್ರ ಸತ್ಯ! ಇದೇನು ಅವ್ಳಿಗೆ ಹೊಸದೇನು ಅಲ್ವಲ್ಲಾ? ಶಬರಿಮಲೆ ದರ್ಶನ ಮಾಡ್ಕೊಂಡ್ ಬಂದ್ಮೇಲೆ ನಾಲ್ಕೈದು ದಿನ ಸಭ್ಯನಂತೆ ಓಡಾಡ್ಕೊಂಡಿದ್ದೋನು ಅಂದೊಂದು ದಿನ ಹಾಕಿದ್ದ ಫ್ಲೆಕ್ಸ್ ಕೆಳಗೇ ಫುಲ್ ಟೈಟಾಗಿ ಮಲಗಿದ್ದ!...

ಪ್ರತಿದಿನ ಬದಲಾವಣೆ. ಇಂದು ಇದ್ದ ಫಲಕ ನಾಳೆ ಇಲ್ಲ, ಆ ಜಾಗಕ್ಕೆ ಮತ್ತೊಂದು ಆಕ್ರಮಿಸಿಕೊಂಡಿರುತ್ತೆ. ಎಲ್ಲೆಲ್ಲೂ ರಾಜಕೀಯ ಧುರೀಣರೂ, ಧರ್ಮ ಪ್ರಚಾರಕರ ಮುಖಗಳೇ! ಅವಧಿ ಮುಗಿದ ಮೇಲೆ (ಬೇರೊಂದು ಪೋಸ್ಟ್ ಆ ಜಾಗವನ್ನು ಆಕ್ರಮಿಸಿದಮೇಲೆ) ನಮ್ಮ ಪಾತ್ರ ಮುಗಿತು ಅಂತ ಬೋರ್ಡಿಂದ ಕೆಳಗಿಳಿದ ಫ್ಲೆಕ್ಸ್‌ಗಳೂ ಉಪಯೋಗಕ್ಕೆ ಬರತ್ತೆ ಅಂತ ಮೊನ್ನೆ ಗೊತ್ತಾಯ್ತು. ಇನ್ನೇನು ಬೇಸಿಗೆ ಶುರುವಾಗುತ್ತೆ ಹಪ್ಪಳ ಸಂಡಿಗೆ ಮಾಡ್ಬೇಕೂಂತ ಮಾತಾಡ್ಕೋತಿದ್ವಿ.ಆಗ ನನ್ನ ಮಗ, ''ತೊಗೋಳಿ, ಹಪ್ಪ ಒಣಗಿಸ್ಕೊಳ್ಳಿ'' ಅಂತ ದೊಡ್ಡ ಫ್ಲೆಕ್ಸ್ ಶೀಟನ್ನೇ ತಂದ್ಕೊಟ್ಟ. ಅದು ಅವ್ನ ಕಾಲೇಜ್ ಫ್ಲೆಕ್ಸ್‌ಗೋಸ್ಕರ ಮಾಡಿಸಿದ್ದಂತೆ. ನಮ್ಮನೆಗೆ ತರಕಾರಿ ಕೊಡೋ ಪುಟ್ಟಮ್ಮನೂ ಯಾವುದೋ ಬ್ಯಾನರ್‌ನ ಉಲ್ಟಾಪಲ್ಟಾ ಮಾಡಿ ಅದ್ರ ಮೇಲೆ ತರಕಾರಿ ಹಾಕೊಂಡಿದ್ದಾಳೆ. ಮೊದಲು ಮರದ ನೆರಳಲ್ಲಿ ಇಟ್ಕೊಂಡಿದ್ದ ಗಾಡಿಯಂಗಡಿಗಳು ಈಗ ಮರಗಳೆಲ್ಲ ಉರುಳಿದ ಮೆಲೆ ನೆರಳಿಗೆ ಫ್ಲೆಕ್ಸ್‌ಗಳನ್ನೇ ಅವಲಂಬಿಸಿರೋದನ್ನೂ ನೋಡಿದ್ದೀನಿ. ಈ ರೀತಿ ಬಣ್ಣ ಬಣ್ಣವಾಗಿ ಅದ್ದೂರಿಯಾಗಿ ಪ್ರಚಾರಕ್ಕೆ ಬಂದ ಹಲವಾರು ಮುಖಗಳು ಕೊನೆಗೆ ಬೆನ್ನು ತಿರುಗಿಸಿ ಯಾರ್‍ಯಾರದ್ದೋ ಕಾಲಕೆಳಗೆ ನಲುಗೋದು ನೋಡಿದ್ರೆ ವಿಷಾದವಾಗುತ್ತದೆ.

---


## ಸುಮಾ ಕಳಸಾಪುರ

ಖಾಸಗಿ ಶಾಲೆಯೊಂದರಲ್ಲಿ ಮುಖ್ಯ ಶಿಕ್ಷಕಿಯಾಗಿರುವ ಲೇಖಕಿ ಕಳೆದೊಂದು ದಶಕದಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಸಣ್ಣ ಕತೆಗಳು, ಹಾಸ್ಯಲೇಖನಗಳು ಹಾಗೂ ಲಲಿತ ಪ್ರಬಂಧಗಳನ್ನು ಬರೆದು ಪ್ರಕಟಿಸಿದ್ದಾರೆ. ಲಲಿತ ಪ್ರಬಂಧಗಳ ಸಂಕಲನ 'ಕಿಟಕಿ' ಪ್ರಕಟಣೆಯ ಹಂತದಲ್ಲಿದೆ.